# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ 569-2018** **ಸಿ. ಡಬ್ಲುಃ 07**

**ಪಿ. ಡಬ್ಲುಃ 02**

| | |
|---|---|
| ಸಾಕ್ಷಿದಾರರ ಹೆಸರು ತಂದೆಯ ಹೆಸರು<br>ವಯಸ್ಸು<br>ಕೆಲಸ<br>ವಾಸ | ಮಹಮದ್ ಇಬ್ರಾಸ್<br>ಮಹಮದ್ ಆಲಿ ಅಸ್ಗರ್ ಸೇಠ್<br>15 ವರ್ಷ<br>ವಿದ್ಯಾರ್ಥಿ<br>ಹಾಲಿ ವಾಸ ಊಟಿ, ತಮಿಳುನಾಡು. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 27-09-2023** |

## ಮುಖ್ಯ ವಿಚಾರಣೆಃ ಶ್ರೀ. ಎಪಿಪಿ ವಕೀಲರಿಂದಃ

ಚಾಸಾ-1 ನನ್ನ ಮಾವ, ಚಾಸಾ-1 ನನ್ನ ತಂದೆ ಚಾಸಾ-3 ನನ್ನ ತಾಯಿ. ಚಾಸಾ-4 ರಿಂದ 6 ನನ್ನ ತಂದೆಯ ಸಂಬಂಧಿಕರು, ಚಾಸಾ-8 ನನ್ನ ತಂಗಿ. ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತಿಲ್ಲ. ಆರೋಪಿ ಯಾವ ರೀತಿ ವಾಹನವನ್ನು ಚಾಲನೆ ಮಾಡಿಕೊಂಡು ಬಂದು ನನ್ನ ತಂದೆ ಚಾಲನೆ ಮಾಡುತ್ತಿದ್ದ ವಾಹನಕ್ಕೆ ಡಿಕ್ಕಿಪಡಿಸಿದ ಎಂದು ಹೇಳಲು ಆಗುವುದಿಲ್ಲ. ಆ ಸಮಯದಲ್ಲಿ ನಾನು ಕಾರಿನಲ್ಲಿ ನಿದ್ರೆಮಾಡುತ್ತಿದ್ದು, ಅಪಘಾತದವಾದ ನಂತರ ಎಚ್ಚರವಾಯಿತು. ಅಪಘಾತ ಯಾ ತಪ್ಪಿನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ.ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದಿಲ್ಲ. ಈ ಪ್ರಕರಣದ ವಿಧ್ಯಮಾನ ಗೊತ್ತಿಲ್ಲ. ಚಾಸಾ-1 ರವರ ಆರೋಪಿ ವಿರುದ್ಧ ದೂರು ನೀಡಿರುವ ವಿಚಾರ ಗೊತ್ತಿಲ್ಲ.

(ಸಸಅ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು)

## ಪಾಟೀ ಸವಾಲುಃ ಶ್ರೀ. ಎಪಿಪಿ ಯವರಿಂದ

ದಿಃ31-05-2017 ರಂದು ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡರು ಎಂದರೆ ಸರಿಯಲ್ಲ. ದಿ.29-05-2017 ರಂದು ನನ್ನ ತಾತನಿಗೆ ಆರೋಗ್ಯ ಸರಿ

ಇಲ್ಲದ ಕಾರಣ ಆಸ್ಪತ್ರೆಗೆ ಸೇರಿಸಿ ಮರಣಹೊಂದಿದ್ದು ನಂತರ ಅವರ ಮೃತ ದೇಹವನ್ನು ನಮ್ಮ ಸ್ವಂತ ಊರಾದ ಕಣ್ಣೂರಿಗೆ ಆಂಬ್ಯೂಲೆನ್ಸ್ ನಲ್ಲಿ ತೆಗೆದುಕೊಂಡು ಹೋಗುತ್ತಿರುವಾಗ ನಾನು ಮತ್ತು ಚಾಸಾ-2 ರಿಂದ 6 ಮತ್ತು 8 ರವರು ನನ್ನ ಬಾಬ್ತು ಕೆಎ-05-ಎಂಆರ್-9564 ಕಾರಿನಲ್ಲಿ ಚಾಸಾ-2 ರವರ ಚಾಲನೆ ಮಾಡಿಕೊಂಡು ಹೋಗುತ್ತಿದ್ದಾಗ ದಿ.30-05-2017 ರಂದು ಬೆಳಗಿನ ಜಾವ 5.45 ಗಂಟೆ ಸಮಯದಲ್ಲಿ ನಂಜನಗೂಡು ಪಟ್ಟಣದ ಹುಲ್ಲಹಳ್ಳಿ ಸರ್ಕಲ್ ಹತ್ತಿರ ಗುಂಡ್ಲುಪೇಟೆ ಕಡೆಗೆ ಹೋಗುತ್ತಿದ್ದಾಗ ಚಾಸಾ-1 ರವರ ಚಾಲನೆ ಮಾಡುತ್ತಿದ್ದ ಕಾರಿಗೆ ಆರೋಪಿಯು ಕೆಎ-10-ಎಫ್-0014 ಬಸ್ಸನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಯಾವುದೇ ಸೂಚನೆ ನೀಡಿದೇ ಬಲಭಾಗಕ್ಕೆ ತಿರುಗಿಸಿಕೊಂಡಾಗ ನಾನು ಚಾಲನೆ ಮಾಡಿದ ಕಾರಿಗೆ ಡಿಕ್ಕಿಪಡಿಸಿದ ಎಂದರೆ ಸರಿಯಲ್ಲ. ನನಗೆ ಮತ್ತು ಚಾಸಾ-8 ರವರಿಗೆ ಅಪಘಾತದಿಂದ ಸಣ್ಣ-ಪುಟ್ಟಗಾಯವಾದ ಕಾರಣ ಯಾವುದೇ ಚಿಕಿತ್ಸೆಯನ್ನು ಪಡೆದಕೊಂಡಿರುವುದಿಲ್ಲ ಹಾಗೂ ಚಾಸಾ-2 ರಿಂದ 6 ಮತ್ತು 8 ರವರಿಗೂ ಅಪಘಾತದಿಂದ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಚಾಸಾ-1 ರವರು ಆರೋಪಿತನ ವಿರುದ್ಧ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಅಪಘಾತ ಪಡಿಸಿದ ಆರೋಪಿ ಹೆಸರು ಹರೀಶ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ದಿ.29-05-2017____________________________ಮತ್ತೆ ನೋಡಿದರೆ ಗುರುತಿಸುತ್ತೇನೆ ಎಂದು ಮೇಲೆ ಓದಿ ಹೇಳಲಾದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗೆಳೆದ ಹೇಳಿಕೆ ಭಾಗವನ್ನು ನಿಪಿ-2 ಎಂದು ಗುರುತಿಸಲಾಯಿತು. ನಿಪಿ-2 ರಂತೆ ಪೊಲೀಸರ ಮುಂದ ಹೇಳಿಕೆ ನೀಡಿದ್ದರು ಹೇಳಿಲ್ಲ ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಬರೆದಿರುವ ವಿಚಾರ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**